ವಾರದ ಪತ್ರ

## ನಳ ಪಾಕದ ಮೋಡಿ!

ಸ್ಟಾರ್ ಸುವರ್ಣದ 'ಬೊಂಬಾಟ್ ಭೋಜನ' ಸೊಗಸಾಗಿ ಮೂಡಿಬರುತ್ತಿದೆ. ಇತ್ತೀಚೆಗೆ ಬಟರ್ ಫ್ರೂಟ್ ಮರದಲ್ಲೇ ಇದ್ದರೆ ಹಣ್ಣಾಗುವುದಿಲ್ಲ ಅದನ್ನು ಕಿತ್ತರೆ ಮಾತ್ರ ಹಣ್ಣಾಗುವುದು ಎಂಬ ವಿಷಯ ತಿಳಿಯಿತು. ಹಾಗೆಯೇ 'ಆಹಾರ ಆರೋಗ್ಯ' ವಿಭಾಗದಲ್ಲಿ ನುಗ್ಗೇಕಾಯಿ ತಿರುಳಿನಿಂದ ಪಲ್ಯ ಮಾಡುವ ವಿಧಾನವನ್ನು ತೋರಿಸಿದರು. ಅದಂತೂ ಗೊತ್ತೇ ಇರಲಿಲ್ಲ. ಹೀಗೆ ಅನೇಕ ಉಪಯುಕ್ತ ಮಾಹಿತಿಗಳು ವೀಕ್ಷಕರಿಗೆ ನೀಡುತ್ತಿದ್ದೀರಿ. ಈ ಕಾರ್ಯಕ್ರಮವನ್ನು ವೀಕ್ಷಿಸಿದ ಪುರುಷರೂ ಚಂದ್ರು ಅವರಂತೆ ನಳಪಾಕ ಮಾಡಿ ಪತ್ನಿಯರನ್ನು ಮೆಚ್ಚಿಸಬಹುದು!

—ಕೆ.ಎಸ್. ಸವಿತ, ಬೆಂಗಳೂರು

## ಯಾರು 'ಅಮೂಲ್'

ಝೀ ಕನ್ನಡದ 'ಸತ್ಯ'ದಲ್ಲಿ ಕಾರ್ತಿಕನನ್ನು ಅಮೂಲ್ ಬೇಬಿ ಎಂದು ಬಿಂಬಿಸಲಾಗುತ್ತಿದೆ. ಅದು ಮಗುವಿನಷ್ಟು ಮುಗ್ಧ ಮನಸ್ಸು ಎಂದು ಹೇಳಿಸುತ್ತಾರೆ. ಈ ಅಮೂಲ್ ಬೇಬಿ ಪ್ರಿಯತಮೆಯೊಂದಿಗೆ ಬಟ್ಟೆ ಅಂಗಡಿಗೆ ಹೋಗಿ ಆಯ್ದ ಬಟ್ಟೆಯ ಟ್ರಯಲ್ ಮಾಡಲು ಹೋಗಿ ಡ್ರಾಯರಿನಲ್ಲಿ ಬರುತ್ತಾನೆ.

'ಕಮಲಿ'ಯಲ್ಲಿ ರಚನಾಳ ಹೊಸ ಪ್ರೇಮಕಥೆ ಶುರುವಾಗಿದೆ. ಬಹಳ ಹಿಂದೆ ಶಂಭು ರಚನಾಳನ್ನು ಇಷ್ಟಪಟ್ಟಂತೆ ತೋರಿಸಿದ ನೆನಪು. ಹಾಡಹಗಲೇ ಮನೆಗೆ ಪ್ರವೇಶಿಸುವ ಕಳ್ಳನೊಬ್ಬ ಈಗ ರಚನಾಳ ಮನಗೆಲ್ಲಲು ಯತ್ನಿಸುತ್ತಿದ್ದಾನೆ. ಹೋಟೆಲಿನಲ್ಲಿ ಭೇಟಿಯೂ ಆಗುತ್ತಾನೆ. ನಂತರ ರಚನಾ ಕ್ಯಾಬ್ ಬುಕ್ ಮಾಡಿ ಡ್ರೈವರ್ ಪಕ್ಕ ಕುಳಿತು ಹೊರಡುತ್ತಾಳೆ. ಸ್ವಲ್ಪ ದೂರ ಹೋದ ನಂತರ ಒಮ್ಮೆ ಹಿಂತಿರುಗಿ ನೋಡುತ್ತಾಳೆ. ಹಿಂತಿರುಗಿ ನೋಡುವ ಹೊತ್ತಿಗೆ ರಚನಾ ಕ್ಯಾಬಿನ ಹಿಂದಿನ ಸೀಟಿನಲ್ಲಿರುತ್ತಾಳೆ. ಈ ರೀತಿ ಉದ್ದದ ಪಟ್ಟಿಯನ್ನೇ ಮಾಡಬಹುದು. ಈ ಎಲ್ಲ ಅಸಂಬದ್ಧತೆಗಳಿಗೆ ಕೊನೆ ಎಂದು?

—ವಾ. ಮುರಳೀಧರ, ತೀರ್ಥಹಳ್ಳಿ.

## ದುರ್ಗುಣ ನಿಲ್ಲಲಿ

ಕಲರ್ಸ್ ಕನ್ನಡದ 'ಗೀತಾ' ಹಾಗೂ 'ಗಿಣಿರಾಮ' ಎರಡರ ಕಥೆಯನ್ನು ಒಬ್ಬರೇ ಬರೆಯುವಂತಿದೆ. ನಾಯಕಿಯರಿಬ್ಬರ ಮನೋಸ್ಥಿತಿ ಒಂದೇ ರೀತಿ ಇದೆ. ಇವರು ತಮ್ಮ ಗಂಡಂದಿರನ್ನು ಕಾಲಡಿಯ ಕಸದಂತೆ ನೋಡುತ್ತಾರೆ. ಗೀತಾ ಗಂಡ ವಿಜಯ್ ಅಷ್ಟು ಪ್ರೀತಿ ಮಾಡಿದರು ತಿರಸ್ಕಾರದಿಂದ ನೋಡುತ್ತಾಳೆ.

ಅಕಸ್ಮಾತ್ ಅವನು ಕೈ ಬಿಟ್ಟರೆ ಅವಳಿಗೆ 'ಸಾವೇ' ಗತಿ. ದುಡುಕು ಸ್ವಭಾವದ 'ಗಿಣಿರಾಮ'ದ ಶಿವರಾಮನ ಹೆಂಡತಿ ಮಹತಿ ಅಷ್ಟು ಅವಹೇಳನ ಮಾಡಿದರೂ ಒಂದಿಷ್ಟು ಕೋಪಿಸಿಕೊಳ್ಳುವುದಿಲ್ಲ. ಒಳ್ಳೆಯ ವ್ಯಕ್ತಿಯಂತೆ ಕಾಣಿಸುತ್ತಾಳೆ. ದುರ್ಗುಣಗಳ ಪಾತ್ರಗಳನ್ನು ನಿಲ್ಲಿಸಿದರೆ ಧಾರಾವಾಹಿಗೆ ಮೆರುಗು ತುಂಬಿದಂತೆ ಆಗುತ್ತದೆ.

—ಎಸ್.ಎಸ್. ಚಂದ್ರಶೇಖರ್, ಬೆಂಗಳೂರು

## ಪ್ರಯೋಜನಕಾರಿ ಸೇತುಬಂಧ

ಚಂದನ ವಾಹಿನಿಯಲ್ಲಿ ಶಾಲಾ ಪಠ್ಯದ ಸಂಪೂರ್ಣ ವಿಡಿಯೊ ಲಭ್ಯವಿದ್ದು, 'ಸೇತುಬಂಧ' ಮಕ್ಕಳಿಗೆ ಉಪಯುಕ್ತವಾಗಿದೆ. ಆನ್‌ಲೈನ್‌ನಲ್ಲಿ ಶಿಕ್ಷಕರು ಬೋಧಿಸಿದ ಪಾಠ ಕೆಲ ಮಕ್ಕಳಿಗೆ ಅರ್ಥವಾಗದೇ ಇರಬಹುದು, ಗೊಂದಲ ಉಂಟಾಗಬಹುದು. ಪರೀಕ್ಷೆಯಲ್ಲಿ ಉತ್ತರಿಸಬೇಕಾದರೆ ಸಮಸ್ಯೆ ತಲೆದೋರಬಹುದು. ಇಂಥ ಮಕ್ಕಳಿಗಾಗಿಯೇ ಶಾಲಾ ಪಠ್ಯವನ್ನು ವಿಡಿಯೊ ರೂಪದಲ್ಲಿ ಪ್ರಸಾರ ಮಾಡಲಾಗುತ್ತಿದೆ. ರೆಕಾರ್ಡೆಡ್ ಪಾಠಗಳೂ ಲಭ್ಯವಿದೆ. ವಿಷಯವಾರು ವಿಡಿಯೊಗಳನ್ನು ಪಠ್ಯಕ್ರಮದ ಅನುಕ್ರಮವಾಗಿ ಅಪ್‌ಲೋಡ್ ಮಾಡಲಾಗಿದೆ. ಪ್ರತಿ ವಿಷಯದ ಮೇಲೆ ಕ್ಲಿಕ್ ಮಾಡಿದರೆ ಪಾಠ ಇರುವ ಭಾಗ ತೆರೆದುಕೊಳ್ಳುತ್ತದೆ. ಇದರ ಸದುಪಯೋಗ ಮಾಡಿಕೊಂಡರೆ ವಿದ್ಯಾರ್ಥಿಗಳಿಗೆ ಅನುಕೂಲ. ಪ್ರತಿದಿನ ಸಂಜೆ ಪ್ರಸಾರವಾಗುವ ಬೋಧನಾ ಭಾಗವನ್ನೂ ತಪ್ಪದೆ ಕೇಳಿದರೂ ಮಕ್ಕಳು ಪಠ್ಯದ ಗೊಂದಲದಿಂದ ದೂರವಾಗಬಹುದು. ಇದೀಗ ಶಾಲಾ ವರ್ಷದ ಅಂತಿಮ ದಿನಗಳು ಸಮೀಪಿಸುತ್ತಿದ್ದು ವಾರ್ಷಿಕ ಪರೀಕ್ಷೆಯೊಂದೇ ಬಾಕಿ ಉಳಿದಿದೆ. ಚಂದನ ವಾಹಿನಿ ಮಾಡಿರುವ ಈ ಕಾರ್ಯಕ್ರಮ ಮಕ್ಕಳಿಗೆ ಅನುಕೂಲವಾಗಿದೆ.

—ಗೌರೀಶ್, ಬೆಂಗಳೂರು

## ಧೂಮ ಬಂದಾಗಲಿ

ಕಲರ್ಸ್ ಕನ್ನಡದ 'ಬಿಗ್ ಬಾಸ್' ಎಂಟನೆಯ ಆವೃತ್ತಿ ಪ್ರಸಾರವಾಗುತ್ತಿರುವುದು ಸಂತೋಷದ ಸಂಗತಿ. ಆದರೆ ಇದರಲ್ಲಿ ಭಾಗವಹಿಸಿದ ಶಂಕರ್ ಅವರಿಗೆ ಸ್ವಲ್ಪ ಕಷ್ಟವಾಗಬಹುದು ಅನ್ನಿಸ್ತಾಯಿದೆ. ಧೂಮಪಾನ ಮಾಡುವುದು. ಆರೋಗ್ಯಕ್ಕೆ ಹಾನಿಕರ ಎಂಬುದು ತಿಳಿದ ವಿಷಯ. ಅಲ್ಲಿ ಧೂಮಪಾನ ಮಾಡುವವರಿಗೆ ಅವಕಾಶ ಮಾಡಿಕೊಡಬಾರದು. ಏಕೆಂದರೆ ಅವರಿಗೆ ಬೇಕಾಗಿದ್ದೆಲ್ಲ ಅಲ್ಲಿ ಸಿಗುವುದಿಲ್ಲ ಎಂಬುದು ಮೊದಲೇ ತಿಳಿಸಿದ್ದೀರಿ. ಹಾಗಾದರೆ ಧೂಮಪಾನಕ್ಕೆ ಏಕೆ ಅವಕಾಶ ಕೊಡಬೇಕು?

—ಬಿ.ಎಸ್. ಮುಳ್ಳೂರ, ಹಲಗತ್ತಿ

ವೈರಸ್ ಗೆದ್ದಿತೆ: ಬಿಗ್‌ಬಾಸ್ ಈವಾರ ಹಿತವೆನಿಸಲಿಲ್ಲ. ಕೊರೊನಾ ಬಗ್ಗೆ ಕೊಟ್ಟ ಟಾಸ್ಕ್‌ನಲ್ಲಿ ವೈರಸ್ ಬಗ್ಗೆ ವಾರಿಯರ್ಸ್, ಲಸಿಕೆ, ಮನುಷ್ಯ ಪಾತ್ರಧಾರಿಗಳು ಸರಿಯಾಗಿ ಅಭಿನಯಿಸದೆ ಟಾಸ್ಕ್ ವಿಫಲಗೊಂಡಿದ್ದು ಬೇಸರ ತಂದಿತು. ಕೊನೆ ಕೊನೆಗೆ ವೈರಸ್ ಗೆದ್ದಂತೆ ಇತ್ತು.

—ಅಂಚೆ ಸುಬ್ರಹ್ಮಣ್ಯ

## ಮಜಾ ನೀಡಿದ ಮಜಾಭಾರತ

ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ಕಲರ್ಸ್ ಕನ್ನಡದ ಜನಪ್ರಿಯ ಧಾರಾವಾಹಿ 'ಕನ್ನಡತಿ'ಯ 250 ಸಂಚಿಕೆ ನಿಮಿತ್ತ ಮಜಾಭಾರತದ ವೇದಿಕೆಯಲ್ಲಿ ಹಾಸ್ಯ ಕಲಾವಿದರೊಂದಿಗೆ ಕನ್ನಡತಿ ತಂಡ ಒಟ್ಟಾಗಿ ನೀಡಿದ ವಿಶೇಷ ಸಂಚಿಕೆ ವಿನೂತನವಾಗಿತ್ತು.

ವಾರಕ್ಕೆರಡು ದಿನವಷ್ಟೇ ಮಜಾಭಾರತದಲ್ಲಿ ಹೆಣ್ಣಿನ ಪಾತ್ರ ಮಾಡುವ ರಾಘು, ಪಿಕೆ, ಕಿಲ್ಲರ್ ಮಂಜ, ಕಾರ್ತಿಕ, ಜಗ್ಗಪ್ಪ, ಸೌಮ್ಯ ಮುಂತಾದವರಿಂದ ಹಾಸ್ಯದ ರಸದೌತಣ ನೀಡಿದರೆ, 'ಕನ್ನಡತಿ'ಯ ಹರ್ಷ– ಭೂವಿ ಅವರು ಮುದ್ದಣ ಮನೋರಮೆಯ ಸಲ್ಲಾಪವನ್ನೆ ನವಿರಾಗಿ ವ್ಯಕ್ತಪಡಿಸುವಂತೆ ಅಭಿನಯಿಸಿದರು. ಹಸಿರುಪೇಟೆಯ ಅಮ್ಮಮ್ಮ... ಭುವನೇಶ್ವರಿ ಅವರ ಒಂದೊಂದು ಮಾತುಗಳು ಕನ್ನಡದ ಭಾಷೆಗೆ ಮೆರುಗು ತುಂಬುವ ಶೈಲಿಯಲ್ಲಿತ್ತು. ಒಟ್ಟಾರೆ ಕಾರ್ಯಕ್ರಮ ಹಾಸ್ಯ ರಸದೌಣವನ್ನು ನೀಡಿತು. ಮೂರು ಗಂಟೆಯ ಈ ಸಂಚಿಕೆ ವಾರಾಂತ್ಯಕ್ಕೆ ಶೋಭೆ ತಂದಿತ್ತು.

—ರಘುನಾಥರಾವ್ ತಾಪ್ಸೆ, ದಾವಣಗೆರೆ

## ತರ್ಕರಹಿತ ಕಥೆ

ಧಾರಾವಾಹಿಗಳಲ್ಲಿ ಕಥೆಯನ್ನು ಬೆಳೆಸಲು ತರ್ಕವನ್ನು ಕೈಬಿಡುತ್ತಾರೆ ಎಂಬುದನ್ನು ಮತ್ತೆ ಹೇಳಬೇಕಿಲ್ಲ ಆದರೆ ಇಂತಹ ಸನ್ನಿವೇಶದಲ್ಲೂ ಎದ್ದು ಕಾಣುವ ಹಾಸ್ಯಾಸ್ಪದ ಘಟನಾವಳಿ ಎಂದರೆ ಅದು ಝೀ ಕನ್ನಡದ 'ಸತ್ಯ' ಧಾರಾವಾಹಿಯದ್ದು. ಅವಳು ಮೆಕಾನಿಕ್ ಆದರೂ ಅವಳು ತೊಟ್ಟ ಬಟ್ಟೆಗೆ ಗ್ರೀಸ್ ಮಸಿಯ ಸುಳಿವೂ ಇರದಿರುವುದು. ಅದು ಹೋಗಲಿ ಎಂದರೂ ಅಮೂಲ್ ಬೇಬಿಯ ಮನೆಯಲ್ಲಿ ಅವಳು ಉಳಿದುಕೊಳ್ಳುವುದು ಯಾವುದೇ ರೀತಿಯಲ್ಲೂ ಸಮರ್ಥನೆ ಸಿಗುವುದಿಲ್ಲ. ಅದರಲ್ಲೂ ಕುಟುಂಬದ ಸದಸ್ಯರಂತೆ ಮನೆಯೆಲ್ಲಾ ತಿರುಗುತ್ತಾ ಫ್ರೀಯಾಗಿರುವುದಂತೂ ತೀರ ಅತಿರೇಕ.

—ವಿನಯ್ ಎಂ.ಎಸ್.